# ಕರ್ನಾಟಕ ಸರ್ಕಾರದ ನಡವಳಿ

**ವಿಷಯ;** ಶ್ರೀ ರವೀಂದ್ರ ತಂದೆ ರಾಘವೇಂದ್ರ ಕುಲಕರ್ಣಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ದನಗೋಪಾಲ ತಂದೆ ಕುಮಾರಸ್ವಾಮಿ ಕರವಸೂಲಿಗಾರರು ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ 12(3) ವರದಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು)ನಿಯಮಗಳು 1957ರ ನಿಯಮ 14-ಎ ರಡಿ ಉಪ ಲೋಕಾಯುಕ್ತರಿಗೆ ಇಲಾಖಾ ವಿಚಾರಣೆಗೆ ವಹಿಸುವ ಕುರಿತು.

**ಓದಲಾಗಿದೆ.** ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ. ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1810/2021/ಪಿಓ ಎಆರ್‌ಇ-17 ದಿ:03.02.2022

ಮೇಲೆ ಓದಲಾದ ವರದಿಯಲ್ಲಿ ಶ್ರೀ ಸಂತೋಷ ತಂದೆ ವೆಂಕಟೇಶ ಪೂಜಾರಿ ಸಾ.ಸಂಗಾಪುರ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ನೀಡಿದ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಕೈಗೊಂಡು ಶ್ರೀ ರವೀಂದ್ರ ತಂದೆ ರಾಘವೇಂದ್ರ ಕುಲಕರ್ಣಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ದನಗೋಪಾಲ ತಂದೆ ಕುಮಾರಸ್ವಾಮಿ ಕರವಸೂಲಿಗಾರರು ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ನೀಡಿರುವ ದೂರಿನಲ್ಲಿ ಸಂಗಾಪುರ ಗ್ರಾಮದ ವಾಸೋಪಯೋಗಿ ಖಾಲಿ ಜಾಗ ಪಂಚಾಯತ್ ಆಸ್ತಿ ನಂ 345 ವಿಸ್ತೀರ್ಣ 1500 ಚದುರ ಅಡಿ ಇರುವ ನಿವೇಶನವನ್ನು ಸಂಗಾಪೂರ ಗ್ರಾಮದ ಶ್ರೀ ವೈ ಎಸ್. ಪ್ರಸಾದ ಇವರಿಂದ ಖರೀದಿ ಮಾಡಿಕೊಂಡಿರುತ್ತಾರೆ. ಸದರಿ ನಿವೇಶನವನ್ನು ದೂರುದಾರರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಲು ಗ್ರಾಮ ಪಂಚಾಯತಿ, ಸಂಗಾಪೂರಕ್ಕೆ ಸಂಪೂರ್ಣ ದಾಖಲೆ ಸಮೇತ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1ನೇ ಮತ್ತು 2ನೇ ಎದುರುದಾರರನ್ನು ದೂರುದಾರರು ಭೇಟಿಯಾಗಿ ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ ಖಾತೆ ಬದಲಾವಣೆಗೆ ಅಧ್ಯಕ್ಷರಿಗೆ ಸಹಿ ಮಾಡಲು ಹೆಚ್ಚುವರಿಯಾಗಿ 3,000/- ರೂ. ಹಣ ಕೊಡಬೇಕಾಗಿ ಹೇಳಿರುತ್ತಾರೆ. ನಂತರ ಚೌಕಾಶಿ ಮಾಡಿದಾಗ ಲಂಚದ ಹಣವಾಗಿ ರೂ. 2,000/- ಬೇಡಿಕೆ ಇಟ್ಟಿದ್ದು ಇರುತ್ತದೆ. ದೂರುದಾರರು ತಮ್ಮ ಮೊಬೈಲ್‌ನಲ್ಲಿ 2ನೇ ಎದುರುದಾರರೊಂದಿಗೆ ಖಾತೆ ಮಾಡಿಕೊಡಲು ಲಂಚಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ ವೀಡಿಯೋ ಚಿತ್ರೀಕರಣ ಮಾಡಿದ್ದು ಇರುತ್ತದೆ. ದೂರುದಾರರಿಗೆ ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ಕೊಪ್ಪಳ ಜಿಲ್ಲೆ ಎ.ಸಿ.ಬಿ ಪೋಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು 31.01.2019 ರಂದು ನೀಡಿರುತ್ತಾರೆ. ಈ ಬಗ್ಗೆ ಕೊಪ್ಪಳ ಎ.ಸಿ.ಬಿ ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 02/2019 ರಲ್ಲಿ ಪ್ರಕರಣ ನೊಂದಾಯಿಸಿಕೊಂಡಿರುತ್ತಾರೆ.

ದಿನಾಂಕ:31.01.2019 ರಂದು ನೆರಳು ಸಾಕ್ಷಿಯೊಂದಿಗೆ ಸದರಿ ಗ್ರಾಮ ಪಂಚಾಯತಿಯ ಕಛೇರಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಕಛೇರಿಗೆ ಬಂದು 2ನೇ ಎದುರುದಾರರಿಗೆ ಖಾತೆಯ ಬದಲಾವಣೆಯ ಬಗ್ಗೆ ಕೇಳಿದಾಗ 2ನೇ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದೂರುದಾರರಿಂದ ಫಿನಾಪ್ತಲಿನ್ ಪೌಡರ್ ಲೇಪಿತ 2,000/- ರೂ.ಗಳನ್ನು ಕೈಯಿಂದ ಪಡೆದುಕೊಂಡಿರುತ್ತಾರೆ. 2ನೇ ಎದುರುದಾರರ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ದ್ರಾವಣದಲ್ಲಿ ಅದ್ದಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಈ ಬಗ್ಗೆ ಲಿಖಿತ ಹೇಳಿಕೆಯನ್ನು ಬರೆದುಕೊಡುವಂತೆ ತನಿಖಾಧಿಕಾರಿಗಳು ಕೇಳಿದಾಗ ಅಧ್ಯಕ್ಷರು/ಪಿಡಿಓ ಗಳು ಅವರಿಂದ ನಿಗಧಿ ಪಡಿಸಿದ್ದ ಮೊತ್ತಕ್ಕಿಂತ ಹಣ ಪಡೆಯಲು ಸೂಚಿಸಿದ್ದರಿಂದ ನಾನು ಹಣ ಪಡೆದುಕೊಂಡಿರುತ್ತೇನೆಂದು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ.

1ನೇ ಎದುರುದಾರರಿಗೆ ಈ ಬಗ್ಗೆ ಲಿಖಿತ ಸಮಜಾಯಿಷಿಯನ್ನು ನೀಡುವಂತೆ ಕೋರಲಾಗಿ, 1ನೇ ಎದುರುದಾರರು ಇಂತಹ ಪ್ರಕರಣಗಳಿಗೆ ಅವಕಾಶ ನೀಡಿರುವುದಿಲ್ಲವೆಂದು ಈ ಬಗ್ಗೆ ಯಾವುದೇ ಪಂಚನಾಮೆಯನ್ನು ಎ.ಸಿ.ಬಿ ಪೋಲೀಸರು ಮಾಡಿರುವುದಿಲ್ಲ. ಆದರೆ, ಖಾಲಿ ಕಾಗದದ ಮೇಲೆ ನಮ್ಮ ಸಹಿಯನ್ನು ಒತ್ತಾಯ ಮಾಡಿ ಬರೆದುಕೊಂಡಿರುತ್ತಾರೆ. ಇಲ್ಲಿಯವರೆಗೆ ಯಾವುದೇ ರೀತಿಯ ಕರ್ತವ್ಯ ಲೋಪ ಮಾಡಿರುವುದಿಲ್ಲ. ಯಾವುದೇ ರೀತಿಯಲ್ಲಿ ನಿಷ್ಕಾಳಜಿತನ ಅಥವಾ ಬೇಜವಾಬ್ದಾರಿಯಿಂದ ಕರ್ತವ್ಯ ಲೋಪ ಮಾಡಿರುವುದಿಲ್ಲ. ಸದ್ಯಕ್ಕೆ ನಮ್ಮ ಮೇಲೆ ಇಲಾಖೆ ವಿಚಾರಣೆ ಜರುಗಿಸುವ ಶಿಫಾರಸ್ಸು ಮಾಡಬಾರದೆಂದು ವಿನಂತಿಸಿ ಸಮಜಾಯಿಷಿಯನ್ನು ನೀಡಿರುತ್ತಾರೆ.

)

ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಗಳಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

ಆದುದರಿಂದ 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 2021 ನಿಯಮ 3(1) (i) ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿ ಕರ್ನಾಟಕ ನಾಗರೀಕ ಸೇವಾ, (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಪ್ರಕರಣದಲ್ಲಿ ದೂರುದಾರರು 2ನೇ ಎದುರುದಾರ ಶ್ರೀ ದನಗೋಪಾಲ ತಂದೆ ಕುಮಾರಸ್ವಾಮಿ, ಕರವಸೂಲಿಗಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದೂರವಾಣಿಯಲ್ಲಿ ಮಾತನಾಡಿರುವ ಸಂಭಾಷಣೆಯೊಂದಿಗೆ ಎ.ಸಿ.ಬಿ ಕಛೇರಿಗೆ ದೂರು ಸಲ್ಲಿಸಿರುವುದಾಗಿರುತ್ತದೆ. ಅಂತೆಯೇ ಎ.ಸಿ.ಬಿ ಪೋಲೀಸರು ಪ್ರಕರಣವನ್ನು ದಾಖಲಿಸಿಕೊಂಡು 2ನೇ ಎದುರುದಾರ ಶ್ರೀ ದನಗೋಪಾಲ ತಂದೆ ಕುಮಾರಸ್ವಾಮಿ, ಕರವಸೂಲಿಗಾರರು ಇವರನ್ನು ದಿನಾಂಕ:31.01.2019 ರಂದು ನೆರಳು ಸಾಕ್ಷಿಯೊಂದಿಗೆ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು/ಉಪಾಧ್ಯಕ್ಷರ ಕೊಠಡಿಯಲ್ಲಿ ಇವರನ್ನು ತನಿಖಾಧಿಕಾರಿಯು ಅಲ್ಲಿನ ನಡವಳಿಕೆಯನ್ನು ತಿಳಿದು ಪಿನಾಪ್ತಲಿನ್ ಲೇಪಿತ ಲಂಚದ ಹಣ ಪಡೆದುಕೊಂಡಿದ್ದ 2ನೇ ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿರುವುದಾಗಿ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

1ನೇ ಎದುರುದಾರರಾದ ಶ್ರೀ ರವೀಂದ್ರ ತಂದೆ ರಾಘವೇಂದ್ರ ಕುಲಕರ್ಣಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ದಾಖಲಾಗಿರುವ ದೂರಿನಲ್ಲಿನ ಅಂಶಗಳು ಹಾಗೂ ತನಿಖಾಧಿಕಾರಿಯವರ ತನಿಖಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರನ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿದೆ.

ಮತ್ತು 2ನೇ ಎದುರುದಾರರಾದ ಶ್ರೀ ದನಗೋಪಾಲ ತಂದೆ ಕುಮಾರಸ್ವಾಮಿ, ಕರವಸೂಲಿಗಾರರು ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಸ್ಥಳೀಯ ಸಂಸ್ಥೆಯ ನೌಕರರಾಗಿರುವುದರಿಂದ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ:29.09.2020ರಲ್ಲಿ ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ರ ಉಪ ನಿಯಮ, 8(4)ರನ್ವಯ ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ ರವರಿಗೆ ಕಳುಹಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 25 ಗ್ರಾಪಂಕಾ 2022, ಬೆಂಗಳೂರು, ದಿನಾಂಕ: 11ನೇ ಏಪ್ರಿಲ್ 2022.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1ನೇ ಎದುರುದಾರರಾದ ಶ್ರೀ ರವೀಂದ್ರ ತಂದೆ ರಾಘವೇಂದ್ರ ಕುಲಕರ್ಣಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರನ್ವಯ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

2ನೇ ಎದುರುದಾರರಾದ ಶ್ರೀ ದನಗೋಪಾಲ ತಂದೆ ಕುಮಾರಸ್ವಾಮಿ, ಕರವಸೂಲಿಗಾರರು ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಸ್ಥಳೀಯ ಸಂಸ್ಥೆಯ ನೌಕರರಾಗಿರುವುದರಿಂದ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ:29.09.2020ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ರ ಉಪ ನಿಯಮ, 8(4)ರನ್ವಯ ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಪ್ಪಳ ಜಿಲ್ಲಾ ಪಂಚಾಯಿತಿ ರವರಿಗೆ ಸೂಚಿಸಿದೆ.

1ನೇ ಎದುರುದಾರರ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
11/4/22
**(ರಾಜು.ಎಂ.ಎಂ)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
11/4/22

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. **(ಮೂಲ ದಾಖಲೆ ಪುಟ ಸಂಖ್ಯೆ: 1 ರಿಂದ 210 ಗಳನ್ನು ಇದರೊಂದಿಗೆ ಹಿಂದಿರುಗಿಸಿದೆ).**
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಜಿಲ್ಲೆ, ಕೊಪ್ಪಳ. **(ನಿಬಂಧಕರು, ಕ.ಲೋ.ಬೆಂ ರವರು ಅ.ಸ.ಪ ಸಂಖ್ಯೆ: ದೂರು/ಉಪಲೋಕ್/1810/2021/ಪಿಎಆರ್ಇ-17, ದಿನಾಂಕ:03.02.2022ರ ವರದಿ ಹಾಗೂ ಎಲ್ಲಾ ದಾಖಲೆಯ ನೆರಳಚ್ಚು ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ)**
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
6. ಶ್ರೀ ರವೀಂದ್ರ ತಂದೆ ರಾಘವೇಂದ್ರ ಕುಲಕರ್ಣಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
7. ಶ್ರೀ ದನಗೋಪಾಲ ತಂದೆ ಕುಮಾರಸ್ವಾಮಿ, ಕರವಸೂಲಿಗಾರರು ಸಂಗಾಪುರ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
9. ನಿರ್ದೇಶಕರು ಇ-ಆಡಳಿತ, **ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು.**